ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 1, March-April 2026, Pp. 48- 53
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# 'ಪಂಪಾಯಾತ್ರೆ' – ಕಟ್ಟಿಕೊಡುವ ಐತಿಹಾಸಿಕ ಪ್ರಜ್ಞೆ ಮತ್ತು ಒಳನೋಟಗಳು

**ಎಂ.ಎನ್.ಅರ್ಚನ ತೇಜಸ್ವಿ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶೇಷಾದ್ರಿಪುರಂ ಕಾಲೇಜು, ಬೆಂಗಳೂರು

**Abstract:**
*ಕನ್ನಡ ಸಾಹಿತ್ಯ ಸಂದರ್ಭದ ಹಲವು ಘಟ್ಟಗಳಲ್ಲಿ ಬೆಳೆದು ಬಂದಿರುವ ಪ್ರವಾಸ ಸಾಹಿತ್ಯ ವಿಶಿಷ್ಟ ಸಾಹಿತ್ಯ ಪ್ರಕಾರವೆನಿಸಿದೆ. ಇವು ಕೇವಲ ಪ್ರವಾಸದ ಸಂತೋಷ ಪ್ರವಾಸಿ ತಾಣದ ಮಾಹಿತಿಗಳನ್ನಷ್ಟೇ ನೀಡದೆ, ಅಲ್ಲಿನ ಜನರ ಬದುಕು, ಆಚಾರ ವಿಚಾರ, ನಂಬಿಕೆಗಳನ್ನು ಅಭಿವ್ಯಕ್ತಿಸುತ್ತದೆ. ಒಂದು ರೀತಿಯಲ್ಲಿ ಪ್ರವಾಸ ಕಥನಗಳು ಆ ಕಾಲದ, ಆ ಸ್ಥಳದ ಮಹತ್ವದ ಸಾಂಸ್ಕೃತಿಕ ದಾಖಲೆಗಳಾಗಿರುತ್ತವೆ. ಅಂತೆಯೇ ವಿ.ಸೀತರಾಮಯ್ಯ ಅವರ 'ಪಂಪಾಯಾತ್ರೆ', ಹಂಪೆ–ವಿಜಯನಗರ ಸಾಮ್ರಾಜ್ಯ, ಪಂಪಾರಸ್ಸಿನ ಸ್ವಾರಸ್ಯಕರ ವಿವರಗಳನ್ನು ನೀಡುತ್ತದೆ. ಇದು ಕೇವಲ ರಂಜನೀಯ ಕತೆ ಮಾತ್ರವಾಗಿರದೆ, ಐತಿಹಾಸಿಕ, ಪೌರಾಣಿಕ ಹಾಗೂ ಸಾಂಸ್ಕೃತಿಕ ಸಂಗತಿಗಳನ್ನು ಅನಾವರಣಗೊಳಿಸುತ್ತದೆ. ಈ ಕೃತಿ ಅದ್ಭುತವಾಗಿ ಓದುಗರನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಆನಂದ ನೀಡುವುದಲ್ಲದೆ, ಅವರನ್ನು ಚಿಂತನಶೀಲನನ್ನಾಗಿಸುವಲ್ಲಿಯೂ ಮಹತ್ವದ ಹೆಜ್ಜೆಯಿಟ್ಟಿದೆ. ಇಂತಹ ಸೂಕ್ಷ್ಮ ಒಳನೋಟಗಳನ್ನು ಕಾಣುವ, ಕಾಣಿಸುವ ಉದ್ದೇಶದ ಫಲವೇ ಈ ಸಂಶೋಧನಾ ಲೇಖನ.*

**Keywords:** *ಕನ್ನಡ ಸಾಹಿತ್ಯ, ಪಂಪಾಯಾತ್ರೆ, ಪಂಪಾಸರಸ್ಸು, ವಿಜಯನಗರ, ಹಂಪೆ, ವೈಭವ, ವಿದ್ಯಾರಣ್ಯ, ವಿರೂಪಾಕ್ಷ ದೇವಾಲಯ.*

## ಪೀಠಿಕೆ

ಹತ್ತೊಂಬತ್ತನೆಯ ಶತಮಾನದಲ್ಲಿ, ಪಾಶ್ಚಾತ್ಯ ಪ್ರಭಾವದಿಂದ ಕನ್ನಡದಲ್ಲಿ ಆಧುನಿಕ ಸಾಹಿತ್ಯ ಉದಯವಾಯಿತು. ಈ ಹೊಸಗನ್ನಡ ಸಾಹಿತ್ಯ ನಂತರದ ದಿನಗಳಲ್ಲಿ ಸಾಕಷ್ಟು ವಿಶಾಲವಾಗಿ, ವ್ಯಾಪಕವಾಗಿ ಸಮೃದ್ಧವಾಗಿ ಬೆಳೆಯುತ್ತಾ ಬಂದಿತು. ಅಭಿವ್ಯಕ್ತಿಯ ರೀತಿ ಬದಲಾಯಿತು. ಅದುವರೆಗೂ ಅವ್ಯಕ್ತವಾಗಿದ್ದ ಅನುಭವದ ಹೊಸ ಆಯಾಮಗಳು, ಹೊಸ ಎತ್ತರ–ಬಿತ್ತರಗಳು ಆಧುನಿಕ ಕನ್ನಡ ಸಾಹಿತ್ಯಕ್ಕೆ ಎಟುಕುತ್ತಾ, ಅದು ವಿವಿಧ ಅನ್ವೇಷಣೆಗಳ ದಾರಿಯಲ್ಲಿ ನಡೆಯುತ್ತಾ ಇನ್ನಷ್ಟು ವೈವಿಧ್ಯಮಯವಾಯಿತು. ಅಕ್ಷರಲೋಕ ಅಪಾರವಾದ ಓದು, ಸೂಕ್ಷ್ಮ ಚಿಂತನೆ, ವಿಮರ್ಶೆಗಳ ಫಲವಾಗಿ ವಿಸ್ತರಿಸಿತು. ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ–ಎಂಬ ಪ್ರಕಾರಗಳಲ್ಲಿ ಆಧುನಿಕ ಸಾಹಿತ್ಯ ಗುರುತಿಸಿಕೊಂಡಿತು.

ಪ್ರಯೋಗಶೀಲತೆ, ಸೃಜನಾತ್ಮಕತೆಗಳನ್ನು ತನ್ನೊಳಗೆ ಮೈಗೂಡಿಸಿಕೊಳ್ಳುತ್ತಲೇ ಬೆಳೆದ ಈ ಘಟ್ಟ ಬಹುಮುಖ ಸಾಹಿತ್ಯ ಪ್ರಕಾರಗಳಿಗೆ ಆಡುಂಬೊಲವಾಯಿತು.

ಕಾವ್ಯ, ಕಥೆ, ಕಾದಂಬರಿ, ಆತ್ಮಕಥೆ, ಲಲಿತ ಪ್ರಬಂಧ, ಮಕ್ಕಳ ಸಾಹಿತ್ಯ, ಪ್ರವಾಸ ಸಾಹಿತ್ಯ, ಅಂಕಣ ಸಾಹಿತ್ಯ – ಹೀಗೆ ಹಲವು ಪ್ರಕಾರಗಳಲ್ಲಿ ಆಧುನಿಕ ಕನ್ನಡ ಸಾಹಿತ್ಯ ನಿರಂತರವಾಗಿ,

***Please cite this article as:*** ಅರ್ಚನ ತೇಜಸ್ವಿ, ಎಂ.ಎನ್. (2026). 'ಪಂಪಾಯಾತ್ರೆ' – ಕಟ್ಟಿಕೊಡುವ ಐತಿಹಾಸಿಕ ಪ್ರಜ್ಞೆ ಮತ್ತು ಒಳನೋಟಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(1), 48– 53

ವಿನೂತನವಾಗಿ, ಫಲಿತಗಳನ್ನು ಓದುಗರಿಗೆ ನೀಡುತ್ತಲೇ ಬಂದಿದೆ. ವಿವಿಧ ರೀತಿಯ ಈ ಸಾಹಿತ್ಯ ಪ್ರಕಾರಗಳಲ್ಲಿ 'ಪ್ರವಾಸ ಸಾಹಿತ್ಯ' ಕ್ಕೆ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟವಾದ ಸ್ಥಾನವಿದೆ.

ಹಿಂದಿನ ಕಾಲದಲ್ಲಿನ ಪುರಾಣದ ಕತೆಗಳಲ್ಲಿ ಋಷಿ–ಮುನಿಗಳು ಅರಣ್ಯದಲ್ಲಿಯೇ ತಮ್ಮ ಆಶ್ರಮಾದಿಗಳನ್ನು ನಿರ್ಮಿಸಿಕೊಂಡು ಏಕಾಂತದ ಬದುಕನ್ನು ಕಟ್ಟಿಕೊಂಡಿದ್ದರು. ಅರಣ್ಯ ವಾಸದ ಜೊತೆ–ಜೊತೆಗೆ ಅಲೆಮಾರಿ ಬದುಕನ್ನು ರೂಪಿಸಿಕೊಂಡಿದ್ದರು. ನಂತರದ ದಿನಗಳಲ್ಲಿ ಮನುಷ್ಯನ ಬದುಕು, ಬದುಕಿನ ಸುತ್ತಣ ಪರಿಸರ ಬದಲಾಗಿ, ಗಿಜಿಗುಟ್ಟುವ ಜನಸಂದಣಿಯ ನಡುವೆ ಇರುವಾಗಲೂ ಏಕಾಂತ, ಶಾಂತಿ–ನೆಮ್ಮದಿಗಳ ಅರಸುತ್ತಾ ಅಲೆಯುವುದನ್ನು ಆತ ನಿಲ್ಲಿಸಿಲ್ಲ. ಹಿಂದೆಲ್ಲಾ ಜನರು ವ್ಯಾಪಾರ–ವ್ಯವಹಾರದ ದೃಷ್ಟಿಯಿಂದಲೋ, ಪುಣ್ಯಾರ್ಜನೆಯ ಕಾರಣದಿಂದಲೋ ಪರಸ್ಥಳಗಳಿಗೆ ಹೋಗುತ್ತಿದ್ದುದನ್ನು ನಾವು ನೆನೆಯಬಹುದು. ಮನುಷ್ಯನ ಅಲೆಮಾರಿ ಗುಣವೇ ಮುಂದೆ 'ಪ್ರವಾಸ' ಎಂಬ ಹೆಸರು ಪಡೆಯಿತು. ಸ್ವತಂತ್ರ ಬಯಸುವ ಮಾನವ ಹೆಚ್ಚುಕಾಲ ಒಂದೇ ಕಡೆ ಇರಲು ಇಷ್ಟ ಪಡುವುದಿಲ್ಲ. ಅವನಿಗೆ ವೈವಿಧ್ಯತೆಯ ಹಂಬಲ, ಸುತ್ತುವ ಚಪಲ. ಅವರ ಈ ಗುಣವೇ 'ಪ್ರವಾಸ ಸಾಹಿತ್ಯ' ದ ಉಗಮಕ್ಕೆ ಆಧಾರ, ತಾನು ಕಂಡ, ಅನುಭವಿಸಿದ, ದಕ್ಕಿಸಿಕೊಂಡ ಎಲ್ಲವನ್ನು ಅಭಿವ್ಯಕ್ತಿಸುವ, ವರ್ಣಿಸುವ ಸಾಹಿತ್ಯವೇ 'ಪ್ರವಾಸ ಸಾಹಿತ್ಯ' ಎಂದಾಯಿತು.

'ದೇಶ ಸುತ್ತಿ ನೋಡು–ಕೋಶ ಓದಿ ನೋಡು'– ಎಂಬುದನ್ನು ಈಗಲೂ ನಾವು ಹೇಳುತ್ತೇವೆ, ನಂಬುತ್ತೇವೆ. ಪ್ರಸ್ತಕ ಜ್ಞಾನದ ಜೊತೆಗೆ, ದೇಶ ಸುತ್ತುವ ಅನುಭವವೂ ಬೇಕು ಎಂಬುದು ಎಲ್ಲರೂ ಒಪ್ಪುವ ಮಾತು. ಈ ಅನುಭವಗಳೆಲ್ಲಾ ಅಕ್ಷರ ರೂಪ ಪಡೆದು ಪ್ರವಾಸ ಸಾಹಿತ್ಯ ನಿರ್ಮಾಣವಾಯಿತು. ಅದರ ಓದುಗನಿಗೂ ಸಾಕಷ್ಟು ಪ್ರಯೋಜನ ಒದಗಿಸಿತು. ವಸ್ತುನಿಷ್ಠವಾದ ಶೈಲಿ–ನಿರೂಪಣೆ, ವೈವಿಧ್ಯತೆ, ಸ್ವಾರಸ್ಯಕರ ವಿವರಣೆ ಈ ಪ್ರವಾಸ ಸಾಹಿತ್ಯದ ಮುಖ್ಯ ಲಕ್ಷಣಗಳು.

**ನವೋದಯ ಸಂದರ್ಭದಲ್ಲಿ ಪ್ರವಾಸ ಕಥನಗಳು**

ನವೋದಯ ಕಾಲಘಟ್ಟದಲ್ಲಿ ಹಲವು ಪ್ರವಾಸ ಕಥನಗಳು ನಮ್ಮ ಗಮನ ಸೆಳೆಯುತ್ತವೆ. ಇಲ್ಲಿ ಪ್ರವಾಸ ಕಥನ ಕೇವಲ ಸ್ಥಳದ ವಿವರವನ್ನು ಮಾತ್ರ ನೀಡದೆ, ಲೇಖಕರ ಖಾಸಗಿ ಅನುಭವಗಳು, ಅಭಿಪ್ರಾಯ, ಸಾಂಸ್ಕೃತಿಕ, ಐತಿಹಾಸಿಕ ಚಿಂತನೆಗಳನ್ನು ವ್ಯಕ್ತಪಡಿಸುವುದು ವಿಶೇಷ.

ವಿ.ಕೃ. ಗೋಕಾಕ್‌ರ 'ಸಮುದ್ರದಾಚೆಯಿಂದ', 'ಸಮುದ್ರದೀಚೆಯಿಂದ', ಶಿವರಾಮ ಕಾರಂತರ 'ಅಪೂರ್ವ ಪಶ್ಚಿಮ', ಶ್ರೀರಂಗರ ಶ್ರೀರಂಗಯಾತ್ರೆ, ಕೆ.ಆರ್.ಕಾರಂತರ 'ಪ್ರವಾಸಿಯ ಪತ್ರಗಳು', ಬಿ.ಜಿ.ಎಲ್ ಸ್ವಾಮಿಯವರ 'ಅಮೆರಿಕಾದಲ್ಲಿ ನಾನು, ಎ.ಎನ್ ಮೂರ್ತಿರಾಯರ 'ಅಪರವಯಸ್ಕನ ಅಮೆರಿಕಾ ಯಾತ್ರೆ', ಗೊರೂರು ರಾಮಸ್ವಾಮಿ ಅಯ್ಯಂಗಾರರ 'ಅಮೆರಿಕಾದಲ್ಲಿ ಗೊರೂರು', ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಇದರ ಜೊತೆ–ಜೊತೆಗೆ ತೀ.ನಂ.ಶ್ರೀ, ಮುಗಳಿ, ಹಾ.ಮಾ.ನಾಯಕ ಮೊದಲಾದವರ ಹೆಸರುಗಳನ್ನು ಸೇರಿಸಬಹುದು.

ಕನ್ನಡದಲ್ಲಿ ಪ್ರವಾಸ ಸಾಹಿತ್ಯ ಆರಂಭವಾಗಿದ್ದು, 1890 ರಲ್ಲಿ. ಕರ್ಕಿ ವೆಂಕಟರಮಣ ಶಾಸ್ತ್ರಿ ಅವರು ಬರೆದ 'ದಕ್ಷಿಣ ಭಾರತ ಯಾತ್ರೆ' ಕನ್ನಡದ ಮೊದಲ ಪ್ರವಾಸ ಗ್ರಂಥ ನಂತರ ಮುಂದಿನ 35 ವರ್ಷಗಳು ಯಾವ ಪ್ರವಾಸ ಗ್ರಂಥಗಳೂ ಕನ್ನಡದಲ್ಲಿ ಕಾಣಲಿಲ್ಲ. ನಂತರ 1928 ರಲ್ಲಿ ಪ್ರಕಟವಾಗಿದ್ದು ವಿ.ಸೀತಾರಾಮಯ್ಯನವರ 'ಪಂಪಾಯಾತ್ರೆ'. ವಿ.ಸೀ ಎಂಬ ಕಾವ್ಯನಾಮದಿಂದಲೇ ಪ್ರಸಿದ್ಧರಾದ ವಿ.ಸೀತಾರಾಮಯ್ಯನವರು, ನವೋದಯ ಕನ್ನಡ ಸಾಹಿತ್ಯದಲ್ಲಿ ಹೊಳೆಯುವ ನಕ್ಷತ್ರ, ಸಂಯಮದ ರಚನೆ, ಸ್ವಂತಿಕೆಯ ಶೈಲಿಯಿಂದಾಗಿ ನವೋದಯ ಸಾಹಿತಿಗಳ ಸಾಲಿನಲ್ಲಿ ಅವರು ಭಿನ್ನವಾಗಿ ನಿಲ್ಲುತ್ತಾರೆ. ರೂಪಾರಾಧಕರಾಗಿ, ಸೌಜನ್ಯಮೂರ್ತಿಯಾಗಿ,

ವಾಙ್ಮಯ ತಪಸ್ವಿಯಾಗಿ ತಮ್ಮ ಕಾಲಘಟ್ಟದ ಹಿರಿಯರು, ಕಿರಿಯರ ಪ್ರೀತಿ–ಆದರಗಳಿಗೆ ಪಾತ್ರರಾಗಿ ತಮ್ಮ ಸ್ನೇಹ ವಲಯವನ್ನು ವಿಸ್ತರಿಸಿಕೊಂಡವರು ವಿ.ಸೀ. ಡಿ.ವಿ.ಗುಂಡಪ್ಪ, ಟಿ.ಎಸ್.ವೆಂಕಣ್ಣಯ್ಯ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಮೊದಲಾದವರ ಒಡನಾಟ ಇವರಿಗೆ ಲಭ್ಯವಾಯಿತು. ಒಮ್ಮೆ ಬಿ.ಎಂ.ಶ್ರೀ ಅವರು ಸೀತಾರಾಮಯ್ಯನವರಿಗೆನ್ನುತ್ತಾರೆ – "We shall be the living bridges across the Tungabhadra"[1]

ಆ ಗುರುವಿನ ಮಾತನ್ನು ಪಾಲಿಸುವ ಸಲುವಾಗಿ ವಿ.ಸೀ.ಯವರು ಸುಮಾರು 30–40 ವರ್ಷಗಳಿಗೂ ಅಧಿಕವಾಗಿ ಸಾಹಿತ್ಯ, ಸಂಸ್ಕೃತಿ ಪ್ರಸಾರ ಕಾರ್ಯವಾಗಿ ಪ್ರವಾಸಗಳನ್ನು ಮಾಡುತ್ತಾ ಬಂದರು. ಇಂತಹ ಒಂದು ಸಂದರ್ಭದಲ್ಲಿಯೇ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ದಕ್ಕಿದ್ದು 'ಪಂಪಾಯಾತ್ರೆ'.

**ಪಂಪಾಯಾತ್ರೆಯೊಳಗೊಂದು ಸುತ್ತು**

ವಿ.ಸೀ. ಅವರು ಬರೆದಿದ್ದು ಒಂದೇ ಪ್ರವಾಸ ಕಥನ. ಅದು ಅವರ ಮೊದಲ ಕೃತಿಯೂ ಹೌದು. ಮೊದಲ ಕೃತಿಯೇ ಪರಿಪಕ್ವವಾಗಿ, ಹದವಾಗಿ ಮೂಡಿ, ಜನಮಾನಸದಲ್ಲಿ ಅಚ್ಚಳಿಯದ ಹೆಜ್ಜೆ ಗುರುತಾಗಿ ನಿಂತಿದೆ.

1925 ರಲ್ಲಿ ಬೆಳಗಾವಿಯಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಷಿಕ ಅಧಿವೇಶನವನ್ನು ಪೂರೈಸಿ, ತಮ್ಮ ಊರಾದ ಬೆಂಗಳೂರಿಗೆ ಹಿಂದಿರುಗುವ ಸಂದರ್ಭದ ಮಧ್ಯೆ ಒಂದು ದಿನ ಹಂಪೆಯನ್ನು ನೋಡಿ, ಒಂದು ಇರುಳು ಅಲ್ಲಿ ತಂಗಿದ್ದು ಹೊರಡುವ ವಿವರಣೆ 'ಪಂಪಾಯಾತ್ರೆ' ಯದ್ದು. ಈ ಪಯಣದಲ್ಲಿ 27ರ ತರುಣರಾದ ವಿ.ಸೀ. ಅವರ ಜೊತೆಯಾಗಿದ್ದು, ರಾಯರು– ಅಂದರೆ ಡಿ.ವಿ.ಗುಂಡಪ್ಪನವರು, ಯಜಮಾನರು– ಅಂದರೆ ಬೆಳ್ಳಾವೆ ವೆಂಕಟನಾರಾಯಣಪ್ಪನವರು, ವೆಂಕಟೇಶಯ್ಯನವರು ಅಂದರೆ– ಟಿ.ಎಸ್.ವೆಂಕಣ್ಣಯ್ಯನವರು, ಮೂರ್ತಿ ಅಂದರೆ ಎಂ.ಆರ್.ಶ್ರೀನಿವಾಸ ಮೂರ್ತಿ. ಕತೆಯುದ್ದಕ್ಕೂ ಈ ಸಂಬೋಧನೆಗಳನ್ನೇ ನಾವು ಕಾಣುತ್ತೇವೆ. ಒಟ್ಟಿನಲ್ಲಿ ಐವರು ಮಹನೀಯರ ಪ್ರಯಾಣದ ಅನುಭವವೇ ಕತೆಯ ಸಾರ.

ಕೇವಲ ಒಂದು ಹಗಲು–ಒಂದು ರಾತ್ರಿಯ ಅನುಭವ ಕಥನ ಮೂಡಿ ಬಂದಿರುವುದು 65 ಪುಟಗಳಲ್ಲಿ. ಇದು ಗಾತ್ರದಲ್ಲಿ ಚಿಕ್ಕದಾದರೂ, ಓದುಗನಿಗೆ ಉಣಬಡಿಸುವ 'ರಸಕವಳ'ದಲ್ಲಿ, ಈ ಕೃತಿಗೆ ಬೇರೆ ಇನ್ನೊಂದು ಕೃತಿ ಹೋಲಿಕೆಯಾಗಲಾರದು. ಕತೆಯನ್ನು ಓದುತ್ತಾ ಹೋದಂತೆ, ಅದು ನಮ್ಮನ್ನು ಹೊಸಲೋಕವೊಂದಕ್ಕೆ ಒಯ್ಯುತ್ತದೆ. ನಮ್ಮ ಕಲ್ಪನಾ ಶಕ್ತಿಗೆ ಹೆಚ್ಚು ಕಷ್ಟಕೊಡದೆ, ವಿಜಯನಗರದ ಪ್ರಾಚೀನ ಪರಂಪರೆಯನ್ನು, ಅದರ ವೈಭವವನ್ನು 'ಪಂಪಾಯಾತ್ರೆ' ನಮ್ಮ ಕಣ್ಣ ಮುಂದೆ ತಂದು ನಿಲ್ಲಿಸುತ್ತದೆ. ನಾವು ಕೇವಲ ಓದುಗರಾಗಿ ಉಳಿಯದೆ ಯಾತ್ರೆಯ ಅನುಭವವನ್ನು ಸ್ವತಃ ನಮ್ಮದಾಗಿಸಿಕೊಳ್ಳುತ್ತೇವೆ.

ಕತೆಗಾರ ಕಂಡ ನೋಟವೆಲ್ಲವೂ ನಮ್ಮದೇ ಎನಿಸುತ್ತದೆ. ನೋಟವೆಂದರೆ ಬರಿ ಕಣ್ಣಿಗೆ ಕಾಣುವುದಷ್ಟೇ ಅಲ್ಲ, ಮನಸ್ಸಿಗೆ ಕಾಣುವ ನೋಟವೂ ಹೌದು. ಹಂಪೆ, ಪಂಪಾಸರಸ್ಸನ್ನು ನೋಡಿದವರೆಲ್ಲರೂ ಕಾಣಲಾರದ್ದನ್ನು ವಿ.ಸೀ. ಕಂಡಿದ್ದಾರೆ, ನಮಗೂ ಕಾಣಿಸಿದ್ದಾರೆ.

ವಿದ್ಯಾರಣ್ಯರ ದೇವಸ್ಥಾನ, ವಿರೂಪಾಕ್ಷ ದೇವಾಲಯ, ಮುಂದಿನ ತೇರುಬೀದಿ, ಸಾಸಿವೆಕಾಳು–ಕಡಲೆಕಾಳು ಗಣಪ, ಅಚ್ಯುತರಾಯರ ದೇವಸ್ಥಾನ, ಕೋದಂಡರಾಮ, ಲಕ್ಷ್ಮೀನಾರಾಯಣ, ಅಂಜನಾಪರ್ವತ, ಆನೆಗೊಂದಿ ಸಂಸ್ಥಾನ, ರಾಮನಿಗಾಗಿ ಪರಿತಪಿಸಿ ಕಾದ ಶಬರಿಯ ಆಶ್ರಮ, ಪ್ರಶಾಂತವಾದ ಪಂಪಾಸರಸ್ಸು – ಎಲ್ಲವುಗಳ ಸ್ವಾರಸ್ಯಕರ ವರ್ಣನೆಯಿದೆ. ಬರಿ ವರ್ಣನೆ – ವಿವರಗಳಷ್ಟೇ ಅಲ್ಲ, ವಿನೋದ–ವಿಷಾದ, ಜೀವನ

ತತ್ತ್ವ, ಸಾರ, ಬದುಕಿನ ಸಾರ್ಥಕತೆ ಎಲ್ಲವೂ ಕೆನೆಗಟ್ಟಿ ನಿಂತಿವೆ.

ಈ ಪುಟ್ಟ ಪ್ರವಾಸ ಕಥನವನ್ನು ಎರಡು ಭಾಗಗಳಲ್ಲಿ ನೋಡಬಹುದು. ಒಂದು ವಾಸ್ತವ ದರ್ಶನ, ಇನ್ನೊಂದು ಕನಸಿನ ನಿರೂಪಣೆ. ಏಕಕಾಲಕ್ಕೆ ಸುಖ–ದುಃಖಗಳ ಅನುಭವವನ್ನು ನೀಡುತ್ತದೆ. ಕತೆಗಾರ ತಾನು ಕಂಡದ್ದೆಲ್ಲವನ್ನೂ ಪರಿಣಾಮಕಾರಿಯಾಗಿ ಕತೆಯ ಮೊದಲ ಭಾಗದಲ್ಲಿ ವಿವರಿಸಿದ್ದು, ನಂತರದ ಭಾಗದಲ್ಲಿ ವಿಜಯನಗರ ಸಾಮ್ರಾಜ್ಯದ 'ಗತವೈಭವ' ಹೇಗಿದ್ದಿರಬಹುದೆಂಬುದನ್ನು ಕನಸಿನ ಮೂಲಕ ತೆರೆದಿಟ್ಟಿದ್ದಾರೆ. ಒಂದು ವರ್ತಮಾನ, ಮತ್ತೊಂದು ಭೂತಕಾಲ. 'ಕತೆಗಾರ' ಕಾಣುವ ಕನಸೇ, ವರ್ತಮಾನ ಮತ್ತು ಭೂತಕಾಲದ ನಡುವೆ ಸೇತುವೆಯಂತೆ ಕೆಲಸ ಮಾಡುತ್ತದೆ. ಈ ಕನಸಿನೊಳಗಡೆ ಓದುಗನೂ ಹೊಕ್ಕಿ, ಅಲ್ಲಿನ ವೈಭೋಗಗಳನ್ನು ಕಂಡು ಮತ್ತೆ ವಾಸ್ತವಕ್ಕೆ ಮರಳಿ, ಹೇಗಿದ್ದ ಸಂಸ್ಥಾನ – ಹೇಗಾಯಿತೆಂದು ಮಮ್ಮಲ ಮರುಗುತ್ತಾನೆ.

ಕತೆಯ ಆರಂಭವೂ ಉಲ್ಲಾಸದಾಯಕವಾಗಿದೆ. ಜೇಡರ ಹುಳುವಿನ ದರ್ಶನದಿಂದ ಗೆಳೆಯರೆಲ್ಲರೂ ನಿದ್ದೆಗೆಟ್ಟು ಫಜೀತಿ ಪಡುತ್ತಾರೆ. ಮಾರನೆಯ ಬೆಳಗ್ಗೆ ಕಾಫಿಯ ಸಮಾರಾಧನೆಯೊಂದಿಗೆ ಪ್ರಯಾಣ ಆರಂಭ. ಮುಂದೆ ಪ್ರಾಚೀನ ಶಿಲ್ಪಕಲಾ ವೈಭವದ ಅನಾವರಣ, ಪ್ರಕೃತಿಯ ರುದ್ರ–ರಮಣೀಯ ಸೌಂದರ್ಯ ವರ್ಣನೆ. ಭಗ್ನವಾದ ವಿಗ್ರಹಗಳಿರುವ ಲಕ್ಷ್ಮೀನಾರಾಯಣ ದೇವಸ್ಥಾನವನ್ನು ಕಂಡು, 'ಅನ್ಯಮತೀಯರೇ ಅದನ್ನು ಮಾಡಿರಬೇಕೆನ್ನಲಾರೆ, ನಾಶಕ್ತಿಯಲ್ಲಿ ನಮ್ಮವರ ವ್ಯಾಪಾರ ಸಣ್ಣದೇನಲ್ಲ'[2] ಎಂದು ಕತೆಗಾರರು ತೀರ್ಪು ನೀಡುತ್ತಾರೆ. ಮುಂದೆ ಸಂನ್ಯಾಸಿ ದಿಬ್ಬ, ವಿಟ್ಠಲಸ್ವಾಮಿಯ ಗುಡಿಯ ಬಗ್ಗೆ ಹೇಳುವಾಗ, ವಿ.ಸೀ. ಅವರ ವರ್ಣನಾ ಶೈಲಿ, ಚಿತ್ರಕ ಶಕ್ತಿ ಪರಿಣಾಮಕಾರಿಯಾಗಿ ಕೆಲಸ ಮಾಡಿದೆ. ಅಲ್ಲಿನ ಶಿಲ್ಪಕಲಾಕೌಶಲ್ಯ, ಚಿತ್ರಕೆಲಸಗಳನ್ನು ಅವರ ಮನಸ್ಸು ಮೆಚ್ಚಿದರೂ, ಹಂಪೆಯ ಶಿಥಿಲಸ್ಥಿತಿ ಅವರನ್ನು ಉದಾಸೀನಗೊಳಿಸುತ್ತದೆ, ನಾರಿಯ ಚಿರ ವೈಧವ್ಯ ಪರಿಣತವಾಗಿ ವ್ಯರ್ಥವಾದ ಸೌಂದರ್ಯದಂತೆ ತೋರುತ್ತದೆ. ಆದರೂ ಅಲ್ಲಿನ ಕೋಟೆ–ಕೊತ್ತಲ, ಅರಮನೆ ಶಿಬಿರ, ವಿಗ್ರಹ–ದೇವಸ್ಥಾನ, ಓಲಗಸ್ಥಾನ ಎಲ್ಲವೂ ಅವರಿಗೆ ಅಸಾಧಾರಣ ಎಂಬಂತೆಯೇ ಕಾಣುತ್ತವೆ. ವಿಜಯನಗರ ಸಾಮ್ರಾಜ್ಯಲಕ್ಷ್ಮಿಯ ಅಪಾವಸ್ಥೆಗಾಗಿ ಅವರ ಹೃದಯ ಮರುಗುತ್ತದೆ. 'ಆನೆಗೊಂದಿಯ ಜೀವಂತ ಸಂಸ್ಥಾನಕ್ಕೆ ಬಂದ ಮೇಲೂ ಮನಸ್ಸಿನಲ್ಲಿ ಶಿಥಿಲ ಸೌಂದರ್ಯದ ಚಿತ್ರ.

ಮುಂದೆ ತನ್ನ ಆರಾಧ್ಯ ದೈವ ಶ್ರೀರಾಮನಿಗಾಗಿ ಹಲವು ಕಾಲ ಕಾದು, ಸೇವೆಗೈದ ಶಬರಿ, ಅವಳ ಪೂಜ್ಯವಾದ ಆಶ್ರಮ, ರಕ್ತಕಾಲುವೆ ಹರಿಸಿ ಯುದ್ಧ ಮಾಡಿದ ವಾಲಿ–ಸುಗ್ರೀವರು ನಮ್ಮ ಕಣ್ಣ ಮುಂದೆಯೇ ಬಂದು ನಿಲ್ಲುತ್ತಾರೆ. ಮುಂದುವರಿದ ಈ ಯಾತ್ರೆ, ತಲುಪುವುದು ಪ್ರಶಾಂತವಾದ ಪಂಪಾ ಸರಸ್ಸನ್ನು ಸುಮಾರು 2–3 ಪುಟಗಳಷ್ಟು ನದಿಯ ವರ್ಣನೆಯಿದೆ. ಯೋಗಿವರ್ಯನಂತೆ, ಸಿದ್ಧನಂತೆ ವಿ.ಸೀ. ಅವರಿಗೆ ಈ ಪಂಪಾ ಸರಸ್ಸು ಕಂಡಿದೆ. ಯಾವ ತಳಮಳ–ಉದ್ವೇಗಗಳಿಲ್ಲದೆ ಒಂದೇ ತೆರನಾಗಿ ಹರಿವ ನದಿ ಪಕ್ಕದಲ್ಲಿ ಸೀತಾ ದೇವಾಲಯ– ಅಂಜನಾಪರ್ವತ. ಶಬ್ಧಕ್ಕೆ ಅವಕಾಶವಿಲ್ಲದ ಸುತ್ತಲಿನ ವಾತಾವರಣ ಒಂದು ಇನ್ನೊಂದಕ್ಕೆ ಹೊಂದಿಕೊಂಡು ಮನ್ವಂತರಗಳಾಚೆಗೆ ತಮ್ಮ ಸ್ಥಿತಿಯನ್ನು ಬದಲಾಯಿಸದೆ ನಿಂತಿರುವ ಪರಿ, ಮನುಷ್ಯನಿಗೆ ಸದಾ ನಿಗೂಢವಾಗಿಯೇ ಉಳಿಯಬಹುದೇನೋ ಚಂಚಲನಾದ ಅಲ್ಪಾಯುಷಿ ಮನುಷ್ಯ ನಿಸರ್ಗದ ಅಗಾಧತೆಯ ಮುಂದೆ ತೃಣಕ್ಕೆ ಸಮಾನ ಎಂಬ ಅರಿವು ಮಾಡುವುದು ಇಲ್ಲಿಯೇ.

ಯಾತ್ರೆಯಲ್ಲಿ ಕಂಡ ದೃಶ್ಯಗಳೆಲ್ಲವೂ ಕಣ್ಣು ಮನಸ್ಸನ್ನು ತುಂಬಿ, ಮಳೆಯಲ್ಲಿ ನೆನೆದು, ಬಳಲಿ ದಣಿದು ಮರಳುವ ಕತೆಗಾರರಿಗೆ ಅಂದಿನ ರಾತ್ರಿ ನಿದ್ರೆಯಿಲ್ಲ. ನಿದ್ರೆಯಲ್ಲೂ ಕನಸು, ರೆಪ್ಪೆ ಮುಚ್ಚಿದರೂ, ಮುಚ್ಚದಿದ್ದರೂ ಕನಸು. 'ಫ್ಲ್ಯಾಶ್ ಬ್ಯಾಕ್' – ತಂತ್ರದ

ಮೂಲಕ ಕತೆಗಾರರು ನಮ್ಮನ್ನು ವಿಜಯನಗರ ಸಾಮ್ರಾಜ್ಯದಲ್ಲಿ ಕರೆಯೊಯ್ದು ನಿಲ್ಲಿಸುತ್ತಾರೆ. ರಾಜವಿಲಾಸ ವೈಭೋಗ, ಸುಖ–ಲೋಲುಪತೆ ನಮ್ಮ ಕಣ್ಣೆದುರು ಕುಣಿಯುತ್ತವೆ. ಶ್ರೀಕೃಷ್ಣದೇವರಾಯ, ಸ್ವಾಮಿಯ ದರ್ಶನಕ್ಕೆ ಬಂದಿದ್ದಾನೆ. ವಿರೂಪಾಕ್ಷನಿಗೆ ಮಂಗಳಾರತಿ ಪೂಜೆ, ಶಯನೋತ್ಸವಗಳು, ಮತ್ತೊಂದೆಡೆ ರಾಣಿಯರ ಅಂತಃಪುರದ ಚಿತ್ರಗಳು, ಅವರ ಒನಪು–ವೈಯ್ಯಾರ, ಅಲಂಕಾರ, ಸರಸ–ಸಲ್ಲಾಪಗಳು. ಸಖಿಯರ ಚೆಲ್ಲಾಟ, ತುಂಟಾಟಗಳು, ಇನ್ನೊಂದು ಸ್ವಪ್ನದಲ್ಲಿ ರಾಮರಾಜನ ಕಾಲದ ಒಡ್ಡೋಲಗ, ವಿಜಯದಶಮಿಯ ಸಂಭ್ರಮ, ಸಾಹಸ ಕಲೆಗಳ ಪ್ರದರ್ಶನ, ಸಭೆಯ ನಡುವೆಯೇ ಬಿಜಾಪುರ ಸುಲ್ತಾನ ಆದಿಲ್‌ಷಾಹನ ಪತ್ರ ಬರುತ್ತದೆ. ಮಹಾರಾಜ, ಅದಕ್ಕೆ ಕೆಚ್ಚೆದೆ–ದರ್ಪಗಳಿಂದ ಉತ್ತರ ನೀಡುತ್ತಾನೆ. ಮಾತ್ರವಲ್ಲ, ರಾಜ ತನ್ನ ಪ್ರಜೆಗಳನ್ನು ಪ್ರೇರೇಪಿಸಿ, ಧೈರ್ಯ ತುಂಬುವಾಗ ಓದುಗನಲ್ಲೂ ದೇಶಭಕ್ತಿ ಉಕ್ಕಿ ಹರಿಯುತ್ತದೆ. ಮರುಕ್ಷಣವೇ ಯುದ್ಧದ ಭೀಭತ್ಸ ದೃಶ್ಯ. ವಿಜೃಂಭಿಸುತ್ತಿದ್ದ ದುರ್ಗದ ಸೌಭಾಗ್ಯ, ಸ್ಮಶಾನಮಯವಾಗಿ ಬದಲಾಗುವ ದುರಂತ ನೋಟ, ಓದುಗ, ಒಂದು ಕ್ಷಣ ಬೆಚ್ಚುವಂತಾಗುತ್ತದೆ. ಇದುವರೆಗೂ ಕಂಡದ್ದೆಲ್ಲವೂ ಕಣ್ಣ ಮುಂದಿನ ಚಿತ್ರಗಳಂತೆ, ಕೆಲವೇ ಹೆಜ್ಜೆಗಳ ದೂರದ್ದು ಎಂಬ ಭಾವನೆ. ಎರಡೇ ದಿನಗಳ ಅನುಭವ ಕಥನದಲ್ಲಿ ಹಲವಾರು ವರ್ಷಗಳ ಚರಿತ್ರೆಯ ದರ್ಶನ.

'ಪಂಪಾಯಾತ್ರೆ' ಯಲ್ಲಿ ಇತಿಹಾಸವಿದೆ, ಪುರಾಣವಿದೆ, ಸಾಂಸ್ಕೃತಿಕ ವಿವರಗಳಿವೆ. ದಟ್ಟವಾದ ವಿವರಗಳೊಂದಿಗೆ ಓದುಗ ಹೊಸದೊಂದು ಲೋಕವನ್ನು ಹೊಕ್ಕಿ ಬಂದಂತಹ ಅನುಭವ ಪಡೆಯುತ್ತಾನೆ. ವಿ.ಸೀ. ಅವರ ಐತಿಹಾಸಿಕ ಪ್ರಜ್ಞೆ ಅನನ್ಯವಾದುದು. ಈ ಪ್ರಜ್ಞೆ, ಕತೆಯನ್ನು ಓದುವ ಪ್ರತಿಯೊಬ್ಬನನ್ನೂ ಚಿಂತನೆಗೆ ಹಚ್ಚುತ್ತದೆ. ಇತಿಹಾಸದ ಪುನರಾವಲೋಕನಕ್ಕೆ ಪ್ರೇರೇಪಿಸುತ್ತದೆ.

ವಿಜಯನಗರದ ಚೆಲುವನ್ನು, ಭವ್ಯ ಇತಿಹಾಸವನ್ನು ವಿ.ಸೀ. ಅವರು ತುಂಬು ಅಭಿಮಾನದಿಂದ ಧನ್ಯತಾಭಾವದಿಂದ ವರ್ಣಿಸಿದ್ದಾರೆ. ಮರೆತು ಹೋದ ಸಾಮ್ರಾಜ್ಯವನ್ನು ಮತ್ತೆ ನೆನಪಿಸಿದ್ದಾರೆ. 'Making life beautiful – here and now' ಎಂಬುದು ಅವರ ಜೀವನತತ್ವ. ಇದೇ ಆಶಯ ಪ್ರತಿಯೊಬ್ಬ ಮನುಷ್ಯನದ್ದೂ ಆದಾಗ, ಆತ ತನ್ನ ಬದುಕಿನೊಂದಿಗೆ ಇತರರ ಬದುಕನ್ನು ಹೇಗೆ ಹಸನು ಮಾಡಬಲ್ಲ– ಎಂಬ ಸಂದೇಶ ಇಲ್ಲಿದೆ. ಅದಮ್ಯವಾದ ಪ್ರಕೃತಿಯ ಶಕ್ತಿಯ ಮುಂದೆ ಮನುಷ್ಯನ ಅಹಂ ಸರ್ವಥಾ ಉಳಿಯಲಾರದೆಂಬುದನ್ನು ಕತೆಯು ನೆನಪಿಸುತ್ತದೆ. ಮೇಲ್ನೋಟಕ್ಕೆ ಸಣ್ಣದೆಂಬಂತೆ ತೋರುವ ಸಂಗತಿಗಳಲ್ಲೂ ಅಸಾಧಾರಣ ವಿಶೇಷತೆಗಳನ್ನು ಅಡಕಗೊಳಿಸುವ ಕಲೆ ವಿ.ಸೀ. ಅವರಿಗೆ ಚೆನ್ನಾಗಿ ಸಿದ್ಧಿಸಿದೆ. ಹೀಗೆ ಬಂದು ಹಾಗೆ ಹೋಗುವ ಸಣ್ಣ ಪಾತ್ರ 'ಚನ್ನಯ್ಯ' ಕತೆ ಮುಗಿದ ಮೇಲೂ ನೆನಪಿನಲ್ಲಿ ಉಳಿಯುವವ. ವಿಮರ್ಶಕರಾದ ನರಹಳ್ಳಿ ಬಾಲಸುಬ್ರಮಣ್ಯರವರು ಚನ್ನಯ್ಯನನ್ನು ದೇಸಿ ಸಂಸ್ಕೃತಿಯ ಪ್ರತಿನಿಧಿ–ಆತ ಸೇದುತ್ತಿದ್ದ ಬೀಡಿಯ ಬೆಳಕು – ದಾರಿ ಕಾಣಿಸುವ ಜ್ಯೋತಿ ಎಂದು ಅಭಿಪ್ರಾಯ ಪಡುತ್ತಾರೆ.

ಇವಷ್ಟೇ ಅಲ್ಲದೆ 5 ಜನ ಯಾತ್ರಿಕರ ಗೆಳೆತನದ ಸಹಜ ಸಲುಗೆ, ಒಬ್ಬರಿಗೊಬ್ಬರು ಕಾಲೆಳೆಯುವುದು, ಅಡುಗೆ–ಪಾತ್ರೆ ಕಸ–ಮುಸುರೆಗಳನ್ನು ಗಂಡಸರು ಸಂಕೋಚವಿಲ್ಲದೆ ಮಾಡುವುದು, ಅವರ ಕಾಫಿ ಪ್ರಿಯತೆ – ಎಲ್ಲವೂ ಸಿಹಿ ಪಾಯಸದ ನಡುವೆ ಸಿಗುವ ದ್ರಾಕ್ಷಿ–ಗೋಡಂಬಿಗಳಂತೆ ಮುದ ನೀಡುತ್ತದೆ. ವಿ.ಸೀ. ಅವರ ಭಾಷೆ, ವರ್ಣನಾ ವೈಖರಿ ಲಾಲಿತ್ಯ ಪೂರ್ಣವಾದದ್ದು, ಕಾಫಿ–ಟೀಗಳಲ್ಲೇ ಸಮನ್ವಯತೆಯ ಪಾಠವನ್ನು ಅವರು ಮಾಡಬಲ್ಲರು. ಒಟ್ಟಿನಲ್ಲಿ 'ಪಂಪಯಾತ್ರೆ' ಹಲವು ಕಾಲ ಉಳಿಯಬಲ್ಲ ಸತ್ವಯುತ ಕೃತಿ. ಪಂಪಾಯಾತ್ರೆಯ ಚೆಲುವು ಬೇಂದ್ರೆಯವರ ಮಾತಿನಲ್ಲಿ ಹೀಗಿದೆ.

***ಹಾಳಿಗೂ ಬಾಳುಂಟೆ?***

***ಉಂಟು ಉಂಟು***

***ಮೌನಕ್ಕೆ ಮಾತುಂಟೆ?***

***ಉಂಟು ಉಂಟು*** [3]

ಪಂಪಾಯಾತ್ರೆಯ ರಸಪಾಕವನ್ನು ಓದಿಯೇ ಸವಿಯಬೇಕು.

**ಕೊನೆಟಿಪ್ಪಣಿಗಳು**

1. ಸುಮನಾ (1985). *ವಿ.ಸೀತಾರಾಮಯ್ಯ (ವಿ.ಸೀ) ಬದುಕು–ಬರಹ–ವ್ಯಕ್ತಿತ್ವ.* ಪುಟ. 25
2. ಸೀತಾರಾಮಯ್ಯ, ವಿ. (1988). *ಪಂಪಾಯಾತ್ರೆ.* ಪುಟ. 27
3. ರಾಮಚಂದ್ರ, ಎಂ. (2006). *ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರು–ವಿ.ಸೀತಾರಾಮಯ್ಯ.* ಪುಟ. 58

**ಆಕರ ಗ್ರಂಥ**


- ಸೀತಾರಾಮಯ್ಯ, ವಿ. (1988). *ಪಂಪಾಯಾತ್ರೆ* (ಐದನೆಯ ಮುದ್ರಣ). ಪ್ರಥಮ ವಿಶ್ವಕನ್ನಡ ಸಮ್ಮೇಳನ ಸಾಹಿತ್ಯಮಾಲೆ.


**ಪರಾಮರ್ಶನ ಗ್ರಂಥಗಳು**


- ಹಳ್ಳಿಕೇರಿ, ಎಫ್.ಟಿ., ಕೆ.ರವೀಂದ್ರನಾಥ . (ಸಂ.). (2002). *ದಶಕದ ಕನ್ನಡ ಸಾಹಿತ್ಯ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ರಾಮಚಂದ್ರ, ಎಂ. (2006). *ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರು–ವಿ.ಸೀತಾರಾಮಯ್ಯ.* ನವಕರ್ನಾಟಕ ಪ್ರಕಾಶನ
- ಸುಮನಾ (1985). *ವಿ.ಸೀತಾರಾಮಯ್ಯ (ವಿ.ಸೀ) ಬದುಕು–ಬರಹ–ವ್ಯಕ್ತಿತ್ವ.* ಐಬಿಎಚ್ ಪ್ರಕಾಶನ